**ಅದ್ವೈತ್ ಚಂದನ್ ನಿರ್ದೇಶನದ ಮೊದಲ ಹಿಂದಿ ಚಿತ್ರ 'ಸೀಕ್ರೇಟ್ ಸೂಪರ್ ಸ್ಟಾರ್' ಸಮಕಾಲೀನ ಭಾರತದ ಮಧ್ಯಮವರ್ಗದವರ ಕನಸಿನ ನೇವರಿಕೆಯಾಗಿ ಇಷ್ಟವಾಗುತ್ತದೆ. ಸೂತ್ರವನ್ನು ಇಟ್ಟುಕೊಂಡು ಹೀಗೂ ಸಿನಿಮಾ ಮಾಡಿ ಗೆಲ್ಲಬಹುದು ಎನ್ನುವುದನ್ನು ಅದ್ವೈತ್ ತಮ್ಮ ಜಾಣತನದಿಂದ ಸಾಬೀತು ಮಾಡಿದ್ದಾರೆ. ಮಕ್ಕಳು ಹಾಗೂ ದೊಡ್ಡವರ ಚಿತ್ರವನ್ನು ನಿರ್ಮಿಸುವ ಅಮೀರ್ ಖಾನ್ ಧೋರಣೆ ಇಲ್ಲಿಯೂ ಮುಂದುವರಿದಿದೆ**

ಅಮೀರ್ ಖಾನ್ ನಿರ್ಮಾಣದ 'ತಾರೆ ಜಮೀನ್ ಪರ್'ನಲ್ಲಿ ಮಕ್ಕಳಿದ್ದರು. 'ದಂಗಲ್' ಸಿನಿಮಾದಲ್ಲಿಯೂ ಮಕ್ಕಳನ್ನು ಕಂಡೆವು. 'ಸೀಕ್ರೇಟ್ ಸೂಪರ್ ಸ್ಟಾರ್'ನಲ್ಲೂ ಮಕ್ಕಳ ಕಲರವ ಇದೆ. ಮೂರೂ ಹಿಂದಿ ಚಿತ್ರಗಳ ಮಕ್ಕಳ ಸಮಸ್ಯೆಗಳೇ ಬೇರೆ. ಗುರಿಗಳೂ ಬೇರೆ. ಕೌಟುಂಬಿಕ ಹಿನ್ನೆಲೆಯೂ ಭಿನ್ನ. ಆದರೆ, ಆ ಮಕ್ಕಳನ್ನು ಒಳಗೊಳ್ಳುವ ದೊಡ್ಡವರ ಜಗತ್ತಿನಲ್ಲಿ ಒಂದು ಸಾಮ್ಯತೆ ಇದೆ. ಅದು ವ್ಯಕ್ತಗೊಳ್ಳುವುದು ತಮ್ಮ ಮೂಗಿನ ನೇರಕ್ಕೇ ಮಕ್ಕಳೂ ಇರಬೇಕು ಎಂಬ ಸಹಜ ಬಯಕೆಯಲ್ಲಿ.

'ಸೀಕ್ರೇಟ್ ಸೂಪರ್ ಸ್ಟಾರ್' ಗಮನ ಸೆಳೆಯುವುದು ಅದರ ಸಮಕಾಲೀನತೆಯಿಂದ. ಅಂತರ್ಜಾಲದ ವಿಶ್ವಾಂತರ್ಯಾಮಿ ಗುಣವೇ ಯುವಮನದ ಸ್ವಾತಂತ್ರ್ಯದ ದಾರಿಯೂ ಆಗಬಲ್ಲದು ಎಂದು ಸಾರುವುದು ಸಿನಿಮಾದ ಒನ್ ಲೈನರ್.

ಇನ್ಸಿಯಾ ಎಂಬ ಮುಸ್ಲಿಂ ಹೆಣ್ಣುಮಗಳ ಕಥೆಯ ಸಿನಿಮಾ ಇದು. ಅವಳ ಅಮ್ಮ ನಿಸ್ವಾರ್ಥಿ. ಅಪ್ಪ ಕಡು ಸಂಪ್ರದಾಯಸ್ಥ. ಅವಳಿಗೊಬ್ಬ ಪುಟ್ಟ ಮುದ್ದು ತಮ್ಮನೂ ಇದ್ದಾನೆ. ವಿಜ್ಞಾನದ ಓದಿನಲ್ಲಿ ಅವಳಿಗೆ ಆಸಕ್ತಿ ಅಷ್ಟಕ್ಕಷ್ಟೆ. ಆದರೂ ಅಪ್ಪನ ಒತ್ತಾಯಕ್ಕೆ ಮಣಿದು ಸೀಟು ಸಿಗುವುದೇ ಕಷ್ಟ ಎನ್ನುವಂಥ ಮೇಡಂ ಮನೆಯಲ್ಲಿ ಪಾಠಕ್ಕೆ ಸೇರಿದ್ದಾಳೆ. ಅವಳ ಧ್ಯಾನವೆಲ್ಲ ಸಂಗೀತದ ಮೇಲೆ. ಅವಳು ಹಾಡಬಲ್ಲಳಷ್ಟೇ ಅಲ್ಲ; ಕಾವ್ಯ ಕೂಡ ಕಟೆಯಬಲ್ಲಳು. ಸೂಕ್ಷ್ಮಮತಿ. ಕೋಪದಲ್ಲಿ ಪದೇ ಪದೇ ಅಮ್ಮನಿಗೆ ಹೊಡೆಯುವ ಅಪ್ಪನ ಮೇಲೆ ಅವಳಿಗೆ ಮಡುಗಟ್ಟಿದ ಕೋಪವಿದೆ. ಕದ್ದು ಮುಚ್ಚಿ ಕೂಡಿಟ್ಟ ಹಣವನ್ನು ಮಗಳ ಕನಸಿನ ಈಡೇರಿಕೆಗಾಗಿ ವಿನಿಯೋಗಿಸುವ ಅಮ್ಮನೆಂದರೆ ಅವಳಿಗೆ ಪಂಚಪ್ರಾಣ. ಅಮ್ಮ ಹಾಗೂ ಅವಳದ್ದೇ ಒಂದು ಆಪ್ತ ಜಗತ್ತನ್ನು ಕಟ್ಟಿಕೊಂಡಿದ್ದಾಳೆ. ಅವಳು ತನ್ನ ಮೋಕ್ಷವನ್ನಷ್ಟೇ ಹುಡುಕುತ್ತಿಲ್ಲ; ಅಮ್ಮನ ಮೋಕ್ಷಕ್ಕಾಗಿಯೂ ಹುಡುಕಾಡುವವಳು.

ಒಂದು ಕಡೆ ಸಂಗೀತಗಾರಳಾಗುವ ಕನಸು. ಇನ್ನೊಂದು ಕಡೆ ದೌರ್ಜನ್ಯ ಎಸಗುವ ಅಪ್ಪನ ಕಬಂಧಬಾಹುಗಳಿಂದ ಆಚೆಗೆ ಅಮ್ಮನನ್ನು ಎಳೆದು ತರುವ ಮಹತ್ವಾಕಾಂಕ್ಷೆ. ಇವೆರಡನ್ನೂ ಭಾವಲೋಕದ ಭಿತ್ತಿಯ ಮೇಲೆ ನಿರ್ದೇಶಕ ಅದ್ವೈತ್ ಚಂದನ್ ಕಟ್ಟಿದ್ದಾರೆ.

ಜನಪ್ರಿಯ ಚಿತ್ರಗಳ ಸೂತ್ರದಲ್ಲೇ ಅದ್ವೈತ್ ಮೈಮರೆಸುವ ಸಿನಿಮಾ ರೂಪಿಸಿರುವುದು ಅನುಕೂಲಸಿಂಧುವಾಗಿಯೇ ಇದೆ. ಇದು 'ಪಕ್ಕಾ ಬ್ಲ್ಯಾಕ್ ಆ್ಯಂಡ್ ವೈಟ್' ಅನುಸಂಧಾನದ ಚಿತ್ರ. ಒಂದಿಷ್ಟು ಒಳಿತುಗಳನ್ನು ಸೃಷ್ಟಿಸಿ, ಅವೆಲ್ಲವನ್ನೂ ನಿಕಷಕ್ಕೆ ಒಡ್ಡುವ ದೊಡ್ಡ ಕೆಡುಕನ್ನು ಸೃಜಿಸುವ ಕ್ರಮವಿದು.

ಕಥಾನಾಯಕಿ ಒಳ್ಳೆಯವಳು. ಅವಳಮ್ಮ ಕಪ್ಪುನೆಲದಂಥ ಅವ್ವ. ಅವಳ ತಮ್ಮ ಕೂಡ ತನ್ನ ಮುಗ್ಧತೆಯ ನಡುವೆಯೇ ಅವರಿಬ್ಬರ 'ಇಹ'ದ ಭಾಗವಾಗುತ್ತಾನೆ. ಶಾಲೆಯಲ್ಲಿ ತನಗೆ ಲೈನ್ ಹೊಡೆಯುವ ಹುಡುಗ ಕಷ್ಟಕಾಲದಲ್ಲಿ ಸಹಾಯ ಮಾಡುವಷ್ಟು ಹೃದಯವಂತ. ತನ್ನ ಹತಾಶೆಯನ್ನೂ ಅವನು ಅರ್ಥ ಮಾಡಿಕೊಳ್ಳಬಲ್ಲ. ಎಲ್ಲರ ಎದುರೇ ಒಮ್ಮೆ ಅವಮಾನ